

ಹಾಗೇ ಆರಾಧಿಸಲಿಲ್ಲವೇ? ಅದಕ್ಕಿಂತ ಹೆಚ್ಚೇನೂ ಇಲ್ಲ.'

'ಅಲ್ಲ ಸುಧಾ, ಆದರೆ ಎಷ್ಟು ದಿನ? ಮುಂದಿನ ದಾರಿ ಏನು ಅಂತ ಯೋಚಿಸಿದ್ದೀಯ?'

'ಶಾಂತಿ, ಮನಸ್ಸು ಅನ್ನೋದು ಹಗುರಾಗಲು ಎಷ್ಟೋ ಬಾರಿ ಕಾಲ್ಪನಿಕ ಫ್ಯಾಂಟಸಿಗಳನ್ನು ಅವಲಂಬಿಸುತ್ತೆ. ಅದು ವ್ಯಭಿಚಾರ ಎನ್ನಿಸುವುದಿಲ್ಲ. ಆದರೆ, ಜೀವಂತವಾಗಿರುವ ಒಬ್ಬ ಮನುಷ್ಯ ಎಂದ ಕೂಡಲೆ ಹೌಹಾರಬೇಕಿಲ್ಲ. ನಮ್ಮ ಪ್ರೀತಿ ಕದ್ದು ಮುಚ್ಚಿ ನಡಿಸುವ ದೈಹಿಕ ಸಂಬಂಧಕ್ಕೂ ಇಳಿಯುವುದಿಲ್ಲ. ಇದೂ ಒಂದು ಸ್ವಾರ್ಥದ ಮಾನಸಿಕ ಅವಲಂಬನೆ ಅಷ್ಟೆ.'

ಶಾಂತಿ, ತನ್ನ ವೈಯಕ್ತಿಕ ಜೀವನದಲ್ಲಿ ಮೈಮರೆತು ತೇಲಿಹೋಗುವಂತಹ ಅನುಭವಕ್ಕೆ ಆಸ್ಪದವನ್ನೇ ನೀಡಿರಲಿಲ್ಲ. ಅದು ಸ್ವಯಂ ನಿಯಂತ್ರಣವಲ್ಲ, ಬದಲಿಗೆ ತನ್ನದೇ ಆದ ದೌರ್ಬಲ್ಯ ಎಂದು ಅದೆಷ್ಟೋ ಬಾರಿ ಅವಳಿಗನ್ನಿಸಿತ್ತು. ಕಾಲೇಜಿನಲ್ಲಿದ್ದಾಗ ಗೆಳತಿಯ ಸುತ್ತ ಚೆಲ್ಲಿ ಹರಡುತ್ತಿದ್ದ ಪ್ರೀತಿ ಎನ್ನುವ ಮೋಡಿಯನ್ನು ಒಬ್ಬ ಪ್ರೇಕ್ಷಕಳಂತೆ ನೋಡಿ ಆನಂದಿಸಿದ್ದಳು. ಸಿನಿಮೀಯವಾದ ಗಾಢ ಪ್ರೀತಿಯನ್ನೋ ಮತ್ತೊಂದನ್ನೋ ನೋಡಿದಾಗ ಅವಳ ಮನಸ್ಸೂ ಅರಳುತಿತ್ತು. ಆದರೆ, ಅದೆಲ್ಲಿಯದೋ ಮೈಗಡರುವ ಎಚ್ಚರ ಶಾಂತಿಯನ್ನು ಬದುಕಿಡೀ ತಬ್ಬಿತ್ತು. ಅರೆಗಳಿಗೆ ಅದನ್ನು ಒದರಿ ಕೊಡವಿಕೊಂಡರೂ ಅದು ಮರಳಿ ನಕ್ಷತ್ರಿಕನಂತೆ ಅವಳ ಮೈಗಂಟಿಬಿಡುತ್ತಿತ್ತು. ಪ್ರೀತಿ ಪ್ರೇಮದ ಪ್ರಪಂಚದ ಯಾವೊಂದು ಸುಖ–ದುಃಖಗಳೂ ಶಾಂತಿಯನ್ನು ಮುಟ್ಟಿರಲಿಲ್ಲ. ಗೆಳತಿಯ ಈಗಿನ ಪ್ರಪಂಚದ ಕಲ್ಪನೆ ಅವಳ ಕೈ ಮೀರಿದ್ದಾಗಿತ್ತು. ಸುಧಾಳಂತದ್ದೇ ಮತ್ತೊಂದು ನೊಂದ ಜೀವ ಸುಧಾಳ ಈಗಿನ ಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದೇನೋ? ಎಂದು ಶಾಂತಿ ಸ್ವತಃ ಅಂದುಕೊಂಡಳು.

ಹಿಂದೆಯೇ ಅವಳ ಕಟು ವೈಚಾರಿಕತೆ ತಲೆಹಾಕಿತ್ತು.

'ಗೆಳತಿಯದು ವಾಸ್ತವ ಲೋಕದಿಂದ ಪಲಾಯನ ಮಾಡಲು ಹವಣಿಸುತ್ತಿರುವ ಮನಸ್ಥಿತಿಯೇ? ಅಥವಾ ಇಪ್ಪತ್ತು ವರ್ಷಗಳಲ್ಲಿ ಆದ ಹಲವು ಭ್ರಮ ನಿರಸನಗಳಿಂದ ನೊಂದು ಕಾಲ್ಪನಿಕವಾಗಿಯಾದರೂ ಬಿಡುಗಡೆ ಬೇಡುತ್ತಿರುವ ಅವಲಂಬಿತ ಸ್ಥಿತಿಯೇ? ಅಸಲಿಗೆ ಪ್ರೀತಿ ಎನ್ನುವುದು ಮದುವೆಯ ನಂತರ ಯಾರೊಂದಿಗೂ ಆಗಬಾರದೇ? ಆಗಬಾರದು ಎನ್ನುವುದು ಸಮಾಜದ ಕಟ್ಟಳೆ ಮಾತ್ರವಲ್ಲವೇ? ಯಾಕಾಗಬಾರದು? ಕನಿಷ್ಠ ಪಕ್ಷ ಅವಳು ಹೇಳುವ ರೀತಿಯಲ್ಲಿ ಅದು ಮಾನಸಿಕ ಮಟ್ಟದಲ್ಲಿ ಮಾತ್ರ ಆದಲ್ಲಿ ಅದರಲ್ಲಿ ತಪ್ಪೇನು? ಇಲ್ಲ... ಇಲ್ಲ... ತನ್ನ ಮನಸ್ಸು ಇಷ್ಟೆಲ್ಲ ವಿಚಾರ ಮಾಡುತ್ತಿರುವುದು ಸುಧಾಳ ಹುಡುಗನಿಗೆ ಮದುವೆಯಾಗಿದೆ ಎಂಬ ಕಾರಣಕ್ಕೆ ಮಾತ್ರ ಅಲ್ಲವೇ? ಇಲ್ಲದಿದ್ದರೆ ಅವಳೇ ನಿಂತು ಶಾಂತಿಯ ಒಳಿತಿಗಾಗಿ ಬೆಂಬಲ ನೀಡುತ್ತಿದ್ದಳೇನೋ? ಆದರೆ, ತನ್ನ ಗೆಳತಿ ಸುಧಾ ಪ್ರಯೋಜನಕ್ಕೆ ಬಾರದ ಕೆಲಸಗಳನ್ನೇ ಮಾಡಿರುವುದು. ನಿಯತ್ತಾಗಿ ಪ್ರೀತಿಸುತ್ತಿದ್ದವರಿಗೆ ಹೃದಯ ಕೊಡಲಿಲ್ಲ. ಮನೆಯವರು ನಿಂತು ಮಾಡಿದ ಮದುವೆ ಸರಿಹೋಗಲಿಲ್ಲ. ದೇಹ ಹಂಚಿಕೊಂಡವನು ಗೆಳತಿಗೆ ಬಾಳು ಕೊಡದೆ ತನ್ನ ವ್ಯಸನಗಳಿಗೇ ದಾಸನಾದ. ಗಂಡ ಕುಡಿದು, ವೇಶ್ಯೆಯರ ಸಂಗ ಮಾಡಿ, ಜೂಜಾಡಿ ಮನೆಗೆ ಬಂದರೂ ಅವನೊಡನೆ ಸುಧಾ ಸಂಬಂಧ ಮುರಿದುಕೊಂಡಿಲ್ಲ. ಬೇರೆ ಇತರರು ಬದುಕಲ್ಲಿ ಪ್ರವೇಶ ಮಾಡದಂತೆ ಇವಳೇ ಅಡ್ಡಗೋಡೆ ಹಾಕಿಕೊಂಡು ಕೂತಳು. ಈಗ 'ಬರೀ ಮಾನಸಿಕ' ಎನ್ನುವ ಇವಳ ತಲೆಯನ್ನು ಯಾವ ಮೆಣಸಿನ ಗಿಡಕ್ಕೆ ತಗೊಂಡು ಕಟ್ಟುವುದು? ಇವಳು ಮೀರಾಬಾಯಿಯು ಅಲ್ಲ, ಅಕ್ಕಮಹಾದೇವಿಯೂ ಅಲ್ಲ. ಇವಳ ಪ್ರೀತಿಗೆ ಗಮ್ಯ ಅಂತ ಏನಾದರೂ ಇದೆಯಾ?' ಎಂದು ಶಾಂತಿ ಯೋಚಿಸುತ್ತಲೇ ಇದ್ದಳು.

'ಏನು ಪ್ರಾಕ್ಟಿಕಲ್ ಲಾಭಗಳ ಬಗ್ಗೆ ಯೋಚಿಸುತ್ತಿದ್ದೀಯ?' ಸುಧಾ ಕೇಳಿದಳು.

ಶಾಂತಿ ವಿಧಿಯಿಲ್ಲದೆ ಒಪ್ಪಿಕೊಂಡು 'ಹೂಂ' ಅಂದಳು.

'ಅದು ಸಾಗರನಿಗಿದೆ ನನಗೂ ಇದೆ' ಎಂದಳು ಸುಧಾ.

'ಸಾಗರ' ಎಂದು ಅವನ ಹೆಸರು ಹೇಳುವಾಗ ಸುಧಾ ಸಂತೋಷಿಸಿದ್ದನ್ನು ಶಾಂತಿ ಗಮನಿಸಿದಳು.

'ಓ ಅವನ ಹೆಸರು ಸಾಗರ್ ಅಂತಲಾ?'

'ಹೌದು... ಸಾಗರ. ಸಾಗರದಂತೇ ಅವನು. ಕುಡಿಯಲು ಆಗದವನು. ಆದರೆ ನೋಡಿದಷ್ಟೂ ಕಣ್ಣಿಗೆ ಆನಂದ ನೀಡುವವನು, ಅವನು ನನ್ನಲ್ಲಿ ಎಬ್ಬಿಸುವ ಅಲೆಗಳಿಗೆ ಮಿತಿಯೇ ಇಲ್ಲ. ನಾನು ಕುಡಿಯಲು ಆಗಲ್ಲ ಅಂತ ಅವನು ನಿಷ್ಪ್ರಯೋಜಕ ಅಂತ ಹೇಳಬೇಡ. ಮನಸ್ಸಿಗೆ ಅವಿರತ ಆನಂದ ನೀಡ್ತಾನೆ. ನನಗೆ ಖುಷಿಯಾದಾಗ, ದುಃಖವಾದಾಗ, ಒಂಟಿಯಾದಾಗ, ನನ್ನ ಬದುಕಿಗೆ ಅರ್ಥವಿಲ್ಲ ಅಂದಾಗ ಅವನನ್ನು ನೋಡ್ತಾ ಅವನ ಅಗಾಧತೆಯಲ್ಲಿ ನನ್ನನ್ನು ನಾನು ಮರೆತುಬಿಡ್ತಿದ್ದೀನಿ, ಅಷ್ಟು ಸಾಕು.'

'ಸಾಕಮ್ಮ ಕವಯಿತ್ರಿ ನೀನು ನನ್ನ ಪ್ರೇಮಸುಧೆ, ಬಾ ಹನಿಸು ಅಂತ ಅವನೇದಾದರೂ ನಿನ್ನ ಕರೆದರೆ ಏನ್ಮಾಡ್ತೀಯ? ಗಂಡಸರದ್ದೇ ಬೇರೆ ಕಥೆ... ಗೊತ್ತಿದೆ ತಾನೇ?' — ಶಾಂತಿ ಗೆಳತಿಯ ವರ್ಣನೆಯಿಂದ ಸ್ವಲ್ಪ ಸಹನೆ ಕಳೆದುಕೊಂಡಿದ್ದಳು.

ಸುಧಾ ಅಪ್ರಬುದ್ಧೆಯೇನಾಗಿರಲಿಲ್ಲ. ಬದುಕಿನಲ್ಲಿ ಅಷ್ಟೆಲ್ಲ ಭ್ರಮನಿರಸನಗಳನ್ನು ಎದುರಿಸಿದ ಮೇಲೂ ಅವಳು ಮುಗ್ಧಳಾಗಿ ಉಳಿಯಲು ಬದುಕು ಅವಕಾಶ ನೀಡಿರಲಿಲ್ಲ.

'ಶಾಂತಿ, ಒಂದಿಷ್ಟೂ ಈರ್ಷ್ಯೆ ಇಲ್ಲದೆ ನನ್ನ ಒಳಿತನ್ನು ಸದಾ ಬಯಸುವ ವ್ಯಕ್ತಿ ನೀನು. ನಮ್ಮ ಸುತ್ತಮುತ್ತಲಿನ ಹುಡುಗರು, ಗಂಡಸರು ನನಗೇ ಗಮನ ನೀಡಿದಾಗಲೂ ಸಮವಯಸ್ಕಳಾಗಿದ್ದ ನೀನು ಯಾವತ್ತೂ ಕರುಬಿದ್ದನ್ನು ನಾನು ನೋಡಿಲ್ಲ. ಆಗೆಲ್ಲ ನನಗೂ ಆಶ್ಚರ್ಯ ಆಗಿದ್ದಿದೆ. ನಿನ್ನ ಹತ್ತಿರ ಮುಚ್ಚುಮರೆ ಯಾಕೆ? ನನಗೆ ಮತ್ತೊಂದು ಸಂಬಂಧ, ದೈಹಿಕ ಕೂಡಿಕೆ ಇವ್ಯಾವುದರಲ್ಲೂ ಆಸಕ್ತಿ ಉಳಿದಿಲ್ಲ. ನನ್ನನ್ನು ದೂರದಿಂದಲೇ ಆಗಲಿ ಪ್ರೀತಿಸುವ ಮತ್ತೊಂದು ಜೀವ, ಗಮನ, ಮೆಚ್ಚುಗೆ ಇವೆಲ್ಲ ಬೇಕಿತ್ತು. ಅದು ನನಗೆ ಸಾಗರನಿಂದ ಸಿಕ್ಕಿದೆ. ಅವನೂ ತನ್ನ ಸಂಸಾರದಲ್ಲಿ ಬೇಸತ್ತವನೇ ಇರಬಹುದು. ಅವನ ಬಗೆಗಿನ ನನ್ನ ಆಕರ್ಷಣೆ, ನನ್ನ ಗಮನ ಮತ್ತು ಮೆಚ್ಚುಗೆ ಅವನನ್ನು ಬದುಕಿನಲ್ಲಿ ಮತ್ತೆ ಮಿಡಿಯುವಂತೆ ಮಾಡಿದೆ. ಈ ವಿಚಾರದಲ್ಲಿ ಇಬ್ಬರೂ ಸಮಾನವಾಗಿ ಲಾಭ ಮಾಡಿಕೊಂಡಿದ್ದೇವೆ. ನಮ್ಮಿಬ್ಬರಲ್ಲಿ ಯಾರಿಗೂ ಈ ಬಗ್ಗೆ ವಿಷಾದ ಅಥವಾ ತಪ್ಪಿತಸ್ಥ ಭಾವನೆಗಳಿಲ್ಲ. ಇಲ್ಲಿಂದ ಮುಂದಕ್ಕೆ ನಾವಿಬ್ಬರೂ ಮುಂದುವರೆಯುವುದೂ ಇಲ್ಲ' ಎಂದು ಸುಧಾ ನಕ್ಕಳು.

ಅದಕ್ಕೆ ಏನು ಹೇಳಬೇಕೆಂದು ಶಾಂತಿಗೆ ತೋಚಲಿಲ್ಲ. ಇದೊಂದು ಭಾವಲೋಕದ ಒಪ್ಪಂದದಂತೆ ಅವಳಿಗದು ತೋರಿತು. ಇಂತಹ ಅಗಣಿತ ಒಪ್ಪಂದಗಳು ಈ ಲೋಕದಲ್ಲಿರಬಹುದು ಎಂಬ ಸಾಧ್ಯತೆಯ ಹೊಳಹು ಅವಳನ್ನು ಮೂಕವಾಗಿಸಿತ್ತು. ಬೆಳೆ ಬೆಳೆಸಲು ಹರಿಸಲಾಗದ ಸಾಗರದ ನೀಲಿ ನೀರು ಅವಳ ನಂಬಿಕೆಗಳ ಸಣ್ಣ ಪ್ರಪಂಚದ ಮರಳನ್ನು ಸೆಳೆದೊಯ್ದ ಭಾವದಲ್ಲಿ ಜಾರಿದ ಶಾಂತಿ, ಸಂಭಾಳಿಸಿಕೊಂಡು ನಿಂತು ಸುಧಾಳನ್ನು ತಬ್ಬಿಕೊಂಡು ಬೆನ್ನು ನೇವರಿಸಿದಳು.

ಪ್ರತಿಕ್ರಿಯಿಸಿ: feedback@sudha.co.in

